PW- 01

**ಇಂದು ದಿಃ 07.02.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ. ವಕೀಲರಿಂದಃ**

ಅಪಘಾತದ ದೂರು ಕೊಟ್ಟಿರುವ ಪಾಪಮ್ಮ ನನ್ನ ತಾಯಿ, ಅವರು ಅಪಘಾತವಾದ ಸ್ಥಳದಲ್ಲಿ ಇರಲಿಲ್ಲ. ನಾನು ಕೂಡ ಅಪಘಾತವನ್ನು ನೋಡಿಲ್ಲ. ಮೃತ ಸತೀಶ ನನ್ನ ತಂದೆ. ನನ್ನ ತಂದೆಗೆ ಚಾಲನಾ ಪರವಾನಗಿ ಇತ್ತು ಮತ್ತು ಅವರ ಬೈಕ್ ವಿಮೆ ಇತ್ತು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ. ಅಪಘಾತವಾದ ಸ್ಥಳವನ್ನು ನಾನು ನೋಡಿಲ್ಲ. 2 ನೇ ಅರ್ಜಿದಾರರಿಗೆ ಮದುವೆಯಾಗಿ ಅವರ ಗಂಡನ ಮನೆಯಲ್ಲಿ ವಾಸವಿದ್ದಾರೆ ಎಂದರೆ ಸರಿ. ನನ್ನ ತಂದೆ ತೀರಿಕೊಂಡ ನಂತರ ನನಗೆ ಮದುವೆಯಾಗಿ ಗಂಡನ ಮನೆಯಲ್ಲಿ ವಾಸವಿದ್ದೇನೆ ಎಂದರೆ ಸರಿ.

1 ನೇ ಅರ್ಜಿದಾರರು ಈಗ ಕೂಲಿ ಕೆಲಸ ಮಾಡುತ್ತಿದ್ದಾರೆ. ನ್ಯಾಯಾಲಯಕ್ಕೆ ನಾನು ಹಾಜರುಪಡಿಸಿರುವ ದಾಖಲೆಗಳ ಬಗ್ಗೆ ತಿಳಿದುಕೊಂಡಿದ್ದೇನೆ. ಅಪಘಾತವಾದ ಸ್ಥಳದಲ್ಲಿ ತಿರುವು ಇದೆ ಎಂದರೆ ಸರಿ. ನನ್ನ ತಂದೆಯ ವಾಹನಕ್ಕೆ ಎದುರುನಿಂದ ಅಪಘಾತವಾಗಿದೆ. ನನ್ನ ತಂದೆ ಕೂಲಿ ಕೆಲಸ ಮಾಡುತ್ತಿದ್ದರು ಅಂದರೆ ನನ್ನ ತಂದೆ ಎಲ್ಲಿ ಕೂಲಿ ಸಿಗುತ್ತಿತ್ತೋ ಅಲ್ಲಿ ಕೆಲಸಕ್ಕೆ ಹೋಗುತ್ತಿದ್ದರು. ಆಧಾರ್ ಕಾರ್ಡ್ ನಲ್ಲಿ ತೋರಿಸಿರುವಂತೆ ನನ್ನ ತಂದೆಯ ಜನ್ಮ ದಿನಾಂಕ ಸರಿಯಾಗಿದೆ. ಶ್ರೀನಿವಾಸ ಎಂಬುವರು ನನಗೆ ಪರಿಚಯವಿಲ್ಲ, ಮುರುಗೇಶ್ ಪರಿಚಯವಿದ್ದಾರೆ. ಅವರು ನನ್ನ ಸಂಬಂಧಿಯಾಗಬೇಕು.

ದೊರೆರಾಜು ಎಂಬುವರು ಅಪಘಾತವಾದ ಸ್ಥಳದಲ್ಲಿ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಂದೆ ಅಜಾರೂಗತೆಯಿಂದಲೇ ಅಪಘಾತವಾಗಿದೆ ಎಂದರೆ ಸರಿಯಲ್ಲ. ನನ್ನ ತಂದೆ ರಸ್ತೆಯ

ನಿಯಮಗಳನ್ನು ಪಾಲಿಸಿ ಎಡಭಾಗದಲ್ಲಿ ಹೋಗುತ್ತಿದ್ದರೆ ಅಪಘಾತವಾಗುತ್ತಿರಲಿಲ್ಲ ಅವರು ರಸ್ತೆಯ ಮದ್ಯೆದಿಂದ ಹೋಗುತ್ತಿದ್ದುದರಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ನಾನು ಅಪಘಾತವನ್ನು ನೋಡಿಲ್ಲದಿದ್ದರೂ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅಪಘಾತವಾದ ದಿನ ನನ್ನ ತಂದೆ ಹೆಲ್ಮೆಟ್ ಹಾಕಿರಲಿಲ್ಲ ಎಂದರೆ ಸುಳ್ಳು. ಒಂದು ವೇಳೆ ನನ್ನ ತಂದೆ ಹೆಲ್ಮೆಟ್ ಹಾಕಿದ್ದರೆ ಮಹಜರ್ ನಲ್ಲಿ ನಮೂದಿಸಬೇಕಾಗುತ್ತಿತ್ತು ಎಂದರೆ ನನ್ನ ತಂದೆ ಹೆಲ್ಮೆಟ್ ಹಾಕಿದ್ದರು. ನನ್ನ ತಂದೆ ಹೆಲ್ಮೆಟ್ ಹಾಕಿದ್ದರೆ ಅವರ ತಲೆಗೆ ಗಾಯಗಳಾಗುತ್ತಿರಲಿಲ್ಲ, ಅವರು ಹೆಲ್ಮೆಟ್ ಹಾಕದಿದ್ದ ಕಾರಣ ತಲೆಗೆ ಪೆಟ್ಟಾಗಿ ಮೃತಪಟ್ಟಿದ್ದಾರೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಅಕ್ಕ ನಮ್ಮ ತಂದೆಯ ದುಡಿಮೆಯ ಮೇಲೆ ಅವಲಂಬಿತರಾಗಿರಲಿಲ್ಲ ಎಂದರೆ ಸುಳ್ಳು.

ಅಪಘಾತ ನನ್ನ ತಂದೆಯ ತಪ್ಪಿನಿಂದಲೇ ಆಗಿರುವುದರಿಂದ ನಾವು ಪರಿಹಾರ ಪಡೆಯಲು ಹಕ್ಕುದಾರರಲ್ಲ ಎಂದರೆ ಸುಳ್ಳು. 1 ನೇ ಎದುರುದಾರರು ವಿಮಾ ಪಾಲಿಸಿ ನಿಬಂಧನೆಗಳನ್ನು ಉಲ್ಲಂಘಿಸಿರುವುದರಿಂದ 2 ನೇ ಎದುರುದಾರರು ಪರಿಹಾರ ಕೊಡಲು ಬಾಧ್ಯರಲ್ಲ ಎಂದರೆ ಸರಿಯಲ್ಲ. ನನ್ನ ತಂದೆಗೆ ಮಾಸಿಕ 25-30 ಸಾವಿರ ಸಂಪಾದನೆ ಇರಲಿಲ್ಲ ಎಂದರೆ ಸುಳ್ಳು.

**ಮರುವಿಚಾರಣೆ ಇಲ್ಲಃ**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**